ವುದೇನೆಂದರೆ, ಡೆಪ್ಯುಟಿ ಕಮಿಷನರಿಗೆ ತಾವು ಫುಲ್ ಪವರ್ಸ್ ಕೊಟ್ಟು. ಆ ಜಿಲ್ಲಾಪರಿಷತ್ತಿನ ಎಕ್ಸಿಕ್ಯೂಟೀವ್ ಇಂಜಿನಿಯರ್ ಆಗಲಿ, ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜಿನಿಯರ್ ಆಗಲಿ ಅಥವಾ ಜೂನಿಯರ್ ಇಂಜಿನಿಯರಾಗಲಿ ಮತ್ತೆ ಪಿ.ಡಬ್ಲ್ಯು.ಡಿ.ಯವರಾಗಲಿ, ಮೈನರ್ ಇರಿಗೇಷನ್‌ನವರಾಗಲಿ — ಇವರು ಮೂವರೂ ಕೂಡ ಕಂಬೈಂಡ್ ಆಗಿ ಅವರ ಅಧ್ಯಕ್ಷತೆಯಲ್ಲಿ ಕೆಲಸ ಮಾಡತಕ್ಕಂಥ ಆದೇಶ ಕೊಡಬೇಕು. ಮತ್ತೆ ನೀವು ೨೮ ಕೆಳಗೊ ಅಥವಾ ಬೇರೆ ಯಾವುದೇ ಹೆಡ್‌ನಲ್ಲಿ ಹಣವನ್ನು ಏನು ಬಿಡುಗಡೆ ಮಾಡುತ್ತೀರಿ, ಅದನ್ನು ನೇರವಾಗಿ ಡೆಪ್ಯುಟಿ ಕಮಿಷನರಿಗೆ ಕೊಟ್ಟು, ಅವರಿಂದ ವೀಕ್ಲಿ ರಿಪೋರ್ಟ್ ತರಿಸಿಕೊಂಡು ಎಷ್ಟು ಹಣ ಖರ್ಚು ಮಾಡಿದ್ದಾರೆ, ಇಷ್ಟು ಇಲ್ಲ, ಎಷ್ಟು ಹಣ ಬೇಕು ಎನ್ನುವುದನ್ನು ಅವರಿಗೆ ಕೊಟ್ಟು ಕೆಲಸ ತೆಗೆದುಕೊಳ್ಳತಕ್ಕಂಥಾದ್ದು ಉತ್ತಮ. ಇಲ್ಲ ಅಂದರೆ ಜಿಲ್ಲಾಪರಿಷತ್‌ನ್ನು ನೋಡಿದರೆ ಪಿ.ಡಬ್ಲ್ಯು.ಡಿಗೆ ಆಗುವುದಿಲ್ಲ, ಪಿ.ಡಬ್ಲ್ಯು.ಡಿ.ನವರು ಹೇಳಿದರೆ ಜಿಲ್ಲಾಪರಿಷತ್‌ನವರು ಮಾಡುವುದಿಲ್ಲ, ಮೈನರ್ ಇರಿಗೇಷನ್‌ನವರು ಹೇಳಿದರೆ ಇನ್ನೊಬ್ಬರು ಕೇಳುವುದಿಲ್ಲ. ಆದುದರಿಂದ ದಯವಿಟ್ಟು ಈ ಕೊಆರ್ಡಿನೇಷನ್ ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಜೆ. ಪುಟ್ಟಸ್ವಾಮಿಗೌಡ.— ಆ ಒಂದು ಸಮಸ್ಯೆಯನ್ನು ಪರಿಹಾರ ಮಾಡಿದ್ದೇವೆ. ಜಿಲ್ಲಾಧಿಕಾರಿಗಳ ಮುಖಂಡತ್ವದಲ್ಲಿ ಈ ಕೆಲಸವನ್ನು ಮಾಡತಕ್ಕಂಥಾದ್ದಕ್ಕೆ ನಾವು ತೀರ್ಮಾನ ತೆಗೆದುಕೊಂಡಿದ್ದೇವೆ. ಎಲ್ಲ ಕೆಲಸಗಳನ್ನೂ ಕೂಡ ಪಿ.ಡಬ್ಲ್ಯು.ಡಿ.ಯಲ್ಲಿ ಮಾಡಿ ಜಿಲ್ಲಾಧಿಕಾರಿಗಳ ಕೌಂಟರ್ ಸಿಗ್ನೇಚರ್ ಮೂಲಕ ಹಣವನ್ನು ವಿತರಣೆ ಮಾಡುವುದಕ್ಕೆ ನಾವು ವ್ಯವಸ್ಥೆ ಮಾಡಿದ್ದೇವೆ. ಆದರಂತೆ ನಾವು ಈಗಾಗಲೇ ಸಂಬಂಧಪಟ್ಟವರಿಗೆ ತಿಳಿಸಿದ್ದೇವೆ.

ನಿಲುವಳಿ ಸೂಚನೆಗೆ ಅನುಮತಿ ಕೋರಿಕೆ

ದೂರವಾಣಿ ಕದ್ದಾಲಿಕೆ ಕುರಿತು

SRI K. LAKKAPPA.— Madam Deputy Speaker, I had submitted one Privilege Motion notice against the member of this House and also the former Chief Minister regarding telephone bugging.

(ಗೊಂದಲ)

(ಹತ್ತಾರು ಜನ ಸದಸ್ಯರು ಒಟ್ಟಿಗೆ ಎದ್ದು ನಿಂತು ವಾತನಾಡಿದರು)

ಉಪಾಧ್ಯಕ್ಷರು.— ಮಾನ್ಯ ಲಕ್ಕಪ್ಪನವರೆ, ನಿನ್ನೆ ತಾವು ಇದ್ದಿರೋ ಇಲ್ಲವೋ ನೊಡ್ತಿಲ್ಲ. ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಇದರ ಬಗ್ಗೆ ಒಂದು ತೀರ್ಮಾನವಾಗಿದೆ. ಸೋಮವಾರ ದಿವಸ ಇದರ ಬಗ್ಗೆ ಚರ್ಚೆ ನಡೆಯುವುದಿದೆ.

(ಗೊಂದಲ)

ಉಪಾಧ್ಯಕ್ಷರು.— ಈಗ ಗಮನ ಸೆಳೆಯುವ ಸೂಚನೆ. ಶ್ರೀಯುತ ವಾಟಾಳ್ ನಾಗರಾಜ್ ರವರು ಮಂಬ್ಯಿಮಂತ್ರಿಗಳ ಗಮನ ಸೆಳೆಯುವುದು.

ವ್ಯವಸಾಯ ಸೇವಾ ಸಂಘಗಳು ಗೊಬ್ಬರ ವಿತರಣೆ ಮಾಡದಿರುವುದು

ಶ್ರೀ ಶಿವರಾಮೇಗೌಡ.— ಮಾನ್ಯ ಅಧ್ಯಕ್ಷರೇ. ಈ ರಾಜ್ಯದಲ್ಲಿ ರೈತರಿಗೆ ಗೊಬ್ಬರ ಸಕಾಲದಲ್ಲಿ ಸಿಗುತ್ತಿಲ್ಲ. ವ್ಯವಸಾಯ ಸೇವಾಸಂಘಗಳು ಗೊಬ್ಬರ ವಿತರಣೆ ಮಾಡುತ್ತಾ ಇಲ್ಲ ಎನ್ನುವುದರ ಬಗ್ಗೆ ಗಮನ ಸೆಳೆದಿದ್ದೇನೆ.

ಉಪಾಧ್ಯಕ್ಷರು.— ತಾವು ಬೇರೆ ನೋಟೀಸ್ ಕೊಡಿ.

ಶ್ರೀ ಎಲ್. ಆರ್. ಶಿವರಾಮೇಗೌಡ.— ನಾನು ನೋಟೀಸ್ ಕೊಟ್ಟಿದ್ದೇನೆ. ಇದು ಮೂರು ಸಾರಿ ಚರ್ಚೆಗೆ ಬಂದಿದೆ. ಒಂದು ಸಾರಿ ಮಂತ್ರಿಗಳು ಇರಲಿಲ್ಲ. ಒಂದು ಸಾರಿ ನಾನು ಕೇಳಿದ ಪ್ರಶ್ನೆ ಬೇರೆ ಇತ್ತು. ಇವತ್ತು ರೈತರು ಗೊಬ್ಬರ ಸಿಗದೆ ಕಂಗಾಲಾಗಿಬ್ಬಾರೆ. ರಾಜ್ಯದ ಕೆಲವು ಭಾಗದಲ್ಲಿ ಮಳೆ ಬೀಳುತ್ತಿದೆ. ಇದು ಗಹನವಾದ ವಿಚಾರವಲ್ಲವೆ ?

ಉಪಾಧ್ಯಕ್ಷರು.— ಆದಷ್ಟು ಬೇಗ ತೆಗೆದುಕೊಳ್ಳೋಣ.